ಶ್ರೀ ಜೀವರಾಜ ಆಳ್ವ (ವಾರ್ತಾ, ಪ್ರವಾಸೋದ್ಯಮ ಯುವಜನ ಸೇವೆ ಮತ್ತು ಕನ್ನಡ ಮತ್ತು ಸಂಸ್ಕೃತಿ ಮತ್ತು ಕ್ರೀಡಾ ರಾಜ್ಯ ಸಚಿವರು).—

ಅ) ಈ ವರ್ಷ ದಸರಾ ಮಹೋತ್ಸವಕ್ಕಾಗಿ ಸರ್ಕಾರವು ೨೦.೦೦ ಲಕ್ಷ ರೂ. ಗಳನ್ನು ಮಂಜೂರು ಮಾಡಿದೆ. ಇದರಲ್ಲಿ ಉತ್ಸವಕ್ಕಾಗಿ ೨,೬೫,೦೦೦.೦೦ ರೂ. ಗಳನ್ನು ಮೆರವಣಿಗೆ ಉಪ-ಸಮಿತಿಗೆ ನೀಡಲಾಗಿದೆ. ಎಲ್ಲ ಉಪ-ಸಮಿತಿಗಳಿಂದ ಲೆಕ್ಕಪತ್ರಗಳನ್ನು ಇನ್ನೂ ಪೂರ್ಣ ಗೊಳಿಸದೇ ಇರುವ ಕಾರಣ ನಿಖರವಾದ ಖರ್ಚನ್ನು ಸದ್ಯಕ್ಕೆ ಹೇಳಲು ಬರುವುದಿಲ್ಲ

ಆ) ದಸರಾ ಮಹೋತ್ಸವಕ್ಕೆ ಸಂಬಂಧಪಟ್ಟ ಕಾರ್ಯನಿರ್ವಹಣೆಗಾಗಿ ಸರ್ಕಾರವು ತಾತ್ಕಾಲಿಕ ವಾಗಿ ಹಲವು ಹುದ್ದೆಗಳನ್ನು ಮಂಜೂರು ಮಾಡಿತ್ತು ಮತ್ತು ಈ ಹುದ್ದೆಗಳನ್ನು ಭರ್ತಿ ಮಾಡಲಾಗಿದ್ದು ಸರ್ಕಾರಿ ನೌಕರರಿಗೆ ಅನ್ವಯವಾಗುವ ಸಂಬಳ ಮತ್ತು ಇತರೆ ಭತ್ಯೆ ಗಳನ್ನು ಪಾವತಿ ಮಾಡಲಾಗುತ್ತದೆ. ಈ ಬಗ್ಗೆ ಸೆಪ್ಟೆಂಬರ್ ೧೯೫೫ರಿಂದ ಡಿಸೆಂಬರ್ ೧೯೫೫ರವರೆಗೆ ಒಟ್ಟು ೮೮,೭೩೬-೦೦ ರೂ. ಗಳ ವೆಚ್ಚ ತಗಲಿದೆ.

ಇ) ದಸರಾ ಮಹೋತ್ಸವವನ್ನು ಒಂದು ನಾಡಹಬ್ಬವನ್ನಾಗಿ ಆಚರಿಸಲಾಗುತ್ತದೆ ವಿನಃ ಲಾಭ ಗಳಿಕೆ ಉದ್ದೇಶದಿಂದಲ್ಲ. ಆದಾಗ್ಯೂ ಕೆಲವು ಕಾರ್ಯಕ್ರಮಗಳಿಂದ ಒಟ್ಟು ೨,೧೬,೬೮೬-೫೦ ರೂ.ಗಳ ಆದಾಯ ಬಂದಿರುತ್ತದೆ.

ಈ) ದಸರಾ ಮಹೋತ್ಸವವನ್ನು ನೋಡಲು ಬಂದ ಸುಮಾರು ೧೦ ಲಕ್ಷ ಜನರಲ್ಲಿ ಗಣನೀಯ ಸಂಖ್ಯೆಯಲ್ಲಿ ವಿದೇಶಿಯರು ಇದ್ದರು. ನಿಖರವಾಗಿ ಎಷ್ಟು ಜನ ವಿದೇಶಿಯರು ಉತ್ಸವ ಸಮಯದಲ್ಲಿ ಹಾಜರಿದ್ದರು ಎಂಬುದು ಗೊತ್ತಿಲ್ಲ.

ಕರ್ನಾಟಕದಿಂದ ಲಾಸ್ ಏಂಜಲೀಸ್‌ನಲ್ಲಿ ನಡೆದ ಒಲಂಪಿಕ್ ಕ್ರೀಡಾ ಕೂಟದಲ್ಲಿ ಭಾಗವಹಿಸಿದ ಪ್ರತಿನಿಧಿಗಳ ಬಗ್ಗೆ

೮೭೧. ಶ್ರೀ ಪಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ)—ಮಾನ್ಯ ವಾರ್ತಾ, ಯುವಜನ ಸೇವಾ, ಕ್ರೀಡಾ ಹಾಗೂ ಪ್ರವಾಸೋದ್ಯಮ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ ?

ಅ) ಕರ್ನಾಟಕದಿಂದ ಲಾಸ್ ಏಂಜಲೀಸ್‌ನಲ್ಲಿ ನಡೆದ ಕ್ರೀಡಾ ಕೂಟದಲ್ಲಿ ಭಾಗವಹಿಸಿದ ಪ್ರತಿನಿಧಿ ಗಳ ಹೆಸರೇನು ? ಶಾಸಕರು ಹಾಗೂ ಇನ್ನಿಳಿದವರ ಹೆಸರುಗಳಿಂದಿಗೆ ವಿವರ ನೀಡುವುದು ?

ಆ) ಸರ್ಕಾರದವರು ಇವರಿಗಾಗಿ ಮಾಡಿರುವ ಖರ್ಚಿನ ಒಟ್ಟು ಮೊತ್ತವೆಷ್ಟು ?

ಇ) ಲಾಸ್ ಏಂಜಲೀಸ್‌ನಿಂದ ವಾಪಸ್ಸು ಬಂದ ಮೇಲೆ ಪ್ರತಿನಿಧಿಗಳು ಗಳಿಸಿರುವ ಅನುಭವ ದಿಂದ ಕರ್ನಾಟಕಕ್ಕೆ ಆಗಿರುವ ಲಾಭವೇನು ?

ಈ) ಕ್ರೀಡಾ ಪರಿಷತ್ತಿನ ಅಧ್ಯಕ್ಷರು ಲಾಸ್ ಏಂಜಲೀಸ್‌ಗೆ ಹೋಗದಿರುವುದಕ್ಕೆ ಕಾರಣವೇನು ?

ಉ) ಲಾಸ್ ಏಂಜಲೀಸ್‌ಗೆ ಕಳುಹಿಸಿ ಕೊಟ್ಟಿರುವ ಪ್ರತಿನಿಧಿಗಳ ಆಯ್ಕೆಯನ್ನು ಯಾವ ಅರ್ಹತೆ ಮೇಲೆ ಮಾಡಲಾಯಿತು ?

ಶ್ರೀ ಜೀವರಾಜ ಆಳ್ವ (ವಾರ್ತಾ, ಪ್ರವಾಸೋದ್ಯಮ ಹಾಗೂ ಯುವಜನ ಸೇವಾ ಇಲಾಖೆಯ ಮಾನ್ಯ ಸಚಿವರು).—

ಅ) ೧ ಶ್ರೀ ಬಿ. ಎಸ್. ಹೊರಟ್ಟಿ, ಎಂಎಲ್‌ಸಿ

೨ ಶ್ರೀ ಎಂ. ಆರ್. ಮದನಗೋಪಾಲನಾಯಕ, ಎಂಎಲ್‌ಎ

೩ ಶ್ರೀ ಓಬಣ್ಣರಾಜು, ಎಂಎಲ್‌ಎ

೪ ಶ್ರೀ ಪಿ. ಡಿ. ಗೋವಿಂದರಾಜು, ಎಂಎಲ್‌ಎ

೫ ಶ್ರೀ ಕೆ. ವಂಟ್ಲಪ್ಪ, ಎಂಎಲ್ಎ
೬ ಶ್ರೀ ಲೋಕಯ್ಯ ಶೆಟ್ಟಿ, ಎಂಎಲ್ಎ
೭ ಶ್ರೀ ಬಾಕಿಲ ಹುಕೇರಪ್ಪ, ಎಂಎಲ್ಎ
೮ ಶ್ರೀ ಕೆ. ಯು. ಶೆಟ್ಟಿ, ನಿರ್ದೇಶಕರು, ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ.
೯ ಶ್ರೀ ಜೆ. ಎಂ. ಅಪ್ಪಚ್ಚು, ಕೋಚ್.
೧೦ ಕುಮಾರಿ ವಂದನಾರಾವ್, ಕ್ರೀಡಾಪಟು.

ಆ) ರೂ. ೩,೫೫,೮೦೩–೩೩.

ಇ) ಕರ್ನಾಟಕದ ಕ್ರೀಡಾ ಅಭಿವೃದ್ಧಿಗೆ ಅವರ ಸಲಹೆ, ಸ್ಫೂರ್ತಿ ದೊರಕಿದೆ.

ಈ) ವೈಯಕ್ತಿಕ ಕಾರಣಗಳಿಂದಾಗಿ ಹೊರಡಲಾಗಲಿಲ್ಲ.

ಉ) ಕ್ರೀಡಾ ಕ್ಷೇತ್ರದಲ್ಲಿ ಸಲ್ಲಿಸಿರುವ ಸೇವೆಗಳನ್ನು ಗಮನಿಸಿ ಪ್ರತಿನಿಧಿಗಳನ್ನು ಸರ್ಕಾರದ ವಿವೇಚನೆ ಮೇರೆಗೆ ಆಯ್ಕೆ ಮಾಡಲಾಗಿದೆ.

ಸಿಬ್ಬಂದಿ ಕೊರತೆ ಇರುವ ಪ್ರಾಥಮಿಕ ಆರೋಗ್ಯ ಘಟಕಕ್ಕೆ ನೇಮಕಾತಿ ಕುರಿತಂ

೭೭೧. ಶ್ರೀ ಕೆ. ಪ್ರತಾಪ ಚಂದ್ರಶೆಟ್ಟಿ (ಕುಂದಾಪುರ).—ಮಾನ್ಯ ಆರೋಗ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕುಂದಾಪುರ ಕ್ಷೇತ್ರದ ಗಂಗೊಳ್ಳಿ ಪ್ರಾಥಮಿಕ ಆರೋಗ್ಯ ಘಟಕಕ್ಕೆ ಮಂಜೂರಾದ ವಿವಿಧ ದರ್ಜೆಯ ಸಿಬ್ಬಂದಿಗಳ ಸಂಖ್ಯಾ ಬಲವೆಷ್ಟು ? (ದರ್ಜೆವಾರು ವಿವರ ನೀಡುವುದು)

ಆ) ಅಲ್ಲಿ (ಗಂಗೊಳ್ಳಿ ಪ್ರಾಥಮಿಕ ಆರೋಗ್ಯ ಘಟಕದ) ಕೊರತೆ ಇರುವ ವಿವಿಧ ದರ್ಜೆಯ ಸಿಬ್ಬಂದಿಗಳ ಸಂಖ್ಯಾ ಬಲವೆಷ್ಟು ?

ಇ) ಈ ಕೊರತೆಯನ್ನು ಯಾವಾಗ ಸರಿಪಡಿಸಲಾಗುವುದು ?

ಶ್ರೀ ಎಚ್. ಎಲ್. ತಿಮ್ಮೇಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು).—

ಆ)

ಆರೋಗ್ಯಾಧಿಕಾರಿ (ಸಿನೇ ದರ್ಜೆ)	...	೧
ಔಷಧಿ ವಿತರಕರು	...	೧
ಕಿರಿಯ ಆರೋಗ್ಯ ಸಹಾಯಕಿ	...	೧
ಗ್ರೂಪ್ 'ಡಿ'	...	೨
		೫

ಆ) ಒಂದು ವೈದ್ಯರ ಹುದ್ದೆ ಮಾತ್ರ ಖಾಲಿ ಇದೆ.

ಇ) ಈ ಪ್ರಾಥಮಿಕ ಆರೋಗ್ಯ ಘಟಕಕ್ಕೆ ಮಂಜೂರಾಗಿರುವ ವೈದ್ಯರ ಹುದ್ದೆ ಮೂರನೇ ದರ್ಜೆಯ ಹುದ್ದೆ, ಈಗ ಸರ್ಕಾರವು ಇವರನ್ನು ನೇಮಕ ಮಾಡುತ್ತಿಲ್ಲ. ಅಲ್ಲದೆ ಮೂರನೇ ದರ್ಜೆಯ ೧೮೦ ವೈದ್ಯರ ಹುದ್ದೆಗಳನ್ನು ಒಂದೇ ದರ್ಜೆಗೆ ಉನ್ನತೀಕರಿಸುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿರುತ್ತದೆ.

ರಾಜ್ಯದಲ್ಲಿ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ನೀಡಿರುವ ಬಗ್ಗೆ

೯೪೯. ಶ್ರೀ ಆರ್. ಎನ್. ನಾಯ್ಕ (ಭಟ್ಕಳ).—ಮಾನ್ಯ ವಾರ್ತಾ, ಯುವಜನ ಸೇವಾ, ಕ್ರೀಡಾ ಹಾಗೂ ಪ್ರವಾಸೋದ್ಯಮ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯನ್ನು ಎಷ್ಟು ಜನರಿಗೆ ನೀಡಲಾಗಿದೆ,